# ದಿನಾಂಕ: 11-02-2016 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

*****

**ಹಾಜರಿದ್ದವರು:**

1. ಶ್ರೀ. ಕೆ.ಎಸ್. ಸತ್ಯಮೂರ್ತಿ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ.
2. ಶ್ರೀ. ಕೆ.ಆನಂದ., ನಿರ್ದೇಶಕರು, ಪ್ರಾಥಮಿಕ ಶಿಕ್ಷಣ.
3. ಶ್ರೀ. ಎಚ್.ವಿ. ಕೆಂಪರಾಜು., ಉಪನಿರ್ದೇಶಕರು, ಪ್ರಾಥಮಿಕ ಶಿಕ್ಷಣ
4. ಶ್ರೀಮತಿ ಆರ್. ಮಂಜುಳ, ಹಿರಿಯ ಸಹಾಯಕ ನಿರ್ದೇಶಕರು, ಸಂಸ್ಕೃತ ವಿಭಾಗ.
5. ಶ್ರೀಮತಿ ಪಿ. ಯಶೋದ., ಸಹಾಯಕ ನಿರ್ದೇಶಕರು, ಆರ್.ಟಿ.ಇ. ವಿಭಾಗ.
6. ರಾಜ್ಯದ ಎಲ್ಲಾ ಜಿಲ್ಲೆಗಳ ಆರ್.ಟಿ.ಇ ನೋಡಲ್ ಅಧಿಕಾರಿಗಳು.
7. ಶ್ರೀ ಪಾಲಾಕ್ಷಯ್ಯ, ಸಮಾಲೋಚಕರು, ಆರ್.ಟಿ.ಇ ಕೋಶ.
8. ಶ್ರೀ ಎಂ. ಮಹಮ್ಮದ್ ಬಷೀರ್, ಸಮಾಲೋಚಕರು, ಆರ್.ಟಿ.ಇ ಕೋಶ.
9. ಶ್ರೀ ರಮೇಶ್, ಅಧೀಕ್ಷಕರು, ವೇತನ ಶಾಖೆ,
10. ಶ್ರೀ ಶಿವಕುಮಾರ್, ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವೆಲಪ್‌ಮೆಂಟ್ ಸೆಂಟರ್, ಎಸ್.ಎಸ್.ಎ.
11. ಶ್ರೀಮತಿ ವಿಜಯಾ ಅರುಣ, ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವೆಲಪ್‌ಮೆಂಟ್ ಸೆಂಟರ್, ಎಸ್.ಎಸ್.ಎ.
12. ರಾಜ್ಯದ ಎಲ್ಲಾ ಜಿಲ್ಲೆಗಳ ಕಂಪ್ಯೂಟರ್ ಪ್ರೋಗ್ರಾಮರ್ಸ್.

1) 2016-17ನೇ ಸಾಲಿನ ಆರ್.ಟಿ.ಇ ಪ್ರವೇಶ ಪ್ರಕ್ರಿಯೆ ಕುರಿತು ರಾಜ್ಯದ ಎಲ್ಲಾ ಆರ್.ಟಿ.ಇ.ನೋಡಲ್ ಅಧಿಕಾರಿಗಳ ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸಭೆ ನಡೆಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಿ, ತೀರ್ಮಾನಿಸಲಾಯಿತು.
2) ನೆರೆಹೊರೆಗೆ ಸಂಬಂಧಿಸಿದಂತೆ ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ ಶಾಲೆಗಳ ಮ್ಯಾಪಿಂಗ್ ಮಾಡಲು ಜಿಲ್ಲಾ ಆರ್.ಟಿ.ಇ ನೋಡಲ್ ಅಧಿಕಾರಿಗಳಿಗೆ ಮತ್ತು ಕಂಪ್ಯೂಟರ್ ಪ್ರೋಗ್ರಾಮರ್‌ಗಳಿಗೆ ಪ್ರಾತ್ಯಕ್ಷಿತೆ ಮೂಲಕ ವಿವರಿಸಿ ತಿಳುವಳಿಕೆ ನೀಡಲಾಯಿತು.
3) ನೆರೆಹೊರೆಯಲ್ಲಿ ಯಾವುದೇ ಸರ್ಕಾರಿ, ಅನುದಾನಿತ ಶಾಲೆಗಳಿಲ್ಲವೆಂಬುದನ್ನು ಖಚಿತ ಪಡಿಸಿಕೊಂಡು ಅಂತಹಾ ವಾರ್ಡ್‌ಗಳಲ್ಲಿ ಆರ್.ಟಿ.ಇ ಅಡಿ ಅರ್ಜಿ ಸಲ್ಲಿಸಲು ಪಕ್ಕದ ವಾರ್ಡ್‌ಗೆ ಮ್ಯಾಪಿಂಗ್ ಮಾಡುವಂತೆ ಸೂಚಿಸಲಾಯಿತು.
4) ಆರ್.ಟಿ.ಇ ಅಡಿ ಶುಲ್ಕ ಮರುಪಾವತಿ ಮಾಡುವಾಗ ಈ ಕೆಳಗಿನವುಗಳಲ್ಲಿ ಯಾವುದು ಕಡಿಮೆ ಮೊತ್ತ ಇದೆಯೋ ಆ ಮೊತ್ತವನ್ನು ಪಾವತಿಸಲು ಸೂಚಿಸಲಾಯಿತು.
   ಎ. ಆ ಶಾಲೆಯು ತಲಾವಾರು ವಿದ್ಯಾರ್ಥಿಗೆ ಮಾಡಿರುವ ವೆಚ್ಚ.
   ಬಿ. ಆಡಿಟ್ ವರದಿ ಪ್ರಕಾರ ವಿದ್ಯಾರ್ಥಿಯ ತಲಾವಾರು ವೆಚ್ಚ.
   ಸಿ. ಸರ್ಕಾರ ನಿಗದಿಪಡಿಸಿರುವ ಗರಿಷ್ಟ ಮೊತ್ತ.
5) ಸರ್ಕಾರದ ಆದೇಶ ಸಂಖ್ಯೆ: ಇಡಿ 51 ಪಿಜಿಸಿ 2016 ದಿನಾಂಕ: 08-02-2016ರ ಅನ್ವಯ ಈ ಆದೇಶದಲ್ಲಿ ಬರೆದ ಅಂಶಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಕಾರ್ಯಾನುಷ್ಠಾನಗೊಳಿಸಬೇಕು.
6) ಪ್ರತಿಯೊಂದು ಜಿಲ್ಲೆಯ ಆರ್.ಟಿ.ಇ ನೋಡಲ್ ಅಧಿಕಾರಿಗಳು 2012-13ನೇ ಸಾಲಿನಿಂದ ಆರ್.ಟಿ.ಇ ಅಡಿ ಎಲ್ಲಾ ಶಾಲೆಗಳಿಗೆ ಮರುಪಾವತಿ ಮಾಡಿರುವ ಶುಲ್ಕದ ಬಗ್ಗೆ ಪ್ರತೀ ಶಾಲೆಯ ಲೆಕ್ಕಾಚಾರ ಮಾಡಿ (ಶಾಲಾವಾರು ವರ್ಕ್‌ಶೀಟ್ ಸಿದ್ದಪಡಿಸಿಕೊಂಡು) ನಿಗಧಿತ ನಮೂನೆಯಲ್ಲಿ ಕ್ರೋಢೀಕರಿಸಿ ನಿಗಧಿ ಪಡಿಸಿದ

ದಿನಾಂಕದಂದು ಬೆಂಗಳೂರಿನ ಶಿಕ್ಷಣ ಆಯುಕ್ತರ ಕಛೇರಿಗೆ ಖುದ್ದಾಗಿ ಹಾಜರಾಗಿ ಪ್ರತೀ ಜಿಲ್ಲೆಯ ಮಾಹಿತಿಯನ್ನು ಒಂದು ಪುಸ್ತಕ ರೂಪದಲ್ಲಿ ಆಯುಕ್ತಾಲಯಕ್ಕೆ ಸಲ್ಲಿಸಲು ಸೂಚಿಸಲಾಯಿತು.

7) ಪ್ರತೀ ಶಾಲೆಯ ಲೆಕ್ಕಾಚಾರ ಮಾಹಿತಿಯನ್ನು ಆ ಜಿಲ್ಲೆಯ ಆರ್.ಟಿ.ಇ ನೋಡಲ್ ಅಧಿಕಾರಿಯವರೇ ಖುದ್ದು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗೆ ಭೇಟಿ ನೀಡಿ ಶಾಲಾವಾರು ಬಿಡುಗಡೆ ಮಾಡಿರುವ, ಬಿಡುಗಡೆ ಮಾಡಲು ಅನುಸರಿಸಿರುವ ಕ್ರಮಗಳ ಬಗ್ಗೆ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸುವಂತೆ ಸೂಚಿಸಲಾಯಿತು.

8) ಶುಲ್ಕ ಮರುಪಾವತಿಗೆ ಸಂಬಂಧಿಸಿದಂತೆ ಶಾಲಾವಾರು ದಾಖಲೆಗಳನ್ನು ಪರಿಶೀಲಿಸುವಾಗ ಯಾವುದೇ ತಪ್ಪುಗಳು ಕಂಡುಬಂದಲ್ಲಿ ಅಥವಾ ಶಾಲೆಗಳ ಮಾಹಿತಿ ಕ್ರಮಬದ್ಧವಾಗಿರದಿದ್ದಲ್ಲಿ ಖುದ್ದು ಶಾಲೆಗೇ ಭೇಟಿ ನೀಡಿ ಆ ಶಾಲೆಯಲ್ಲಿ ನಿರ್ವಹಿಸಲಾದ ದಾಖಲೆಗಳನ್ನು ಪರಿಶೀಲಿಸಲು ಆರ್.ಟಿ.ಇ. ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಸೂಚಿಸಲಾಯಿತು.

9) ಕಲಬುರ್ಗಿ ವಿಭಾಗದ ಆರ್.ಟಿ.ಇ ನೋಡಲ್ ಅಧಿಕಾರಿಗಳು ಶುಲ್ಕಮರುಪಾವತಿಗೆ ಸಂಬಂಧಿಸಿದಂತೆ ಸಮರ್ಪಕವಾಗಿ ಮಾಹಿತಿ ನೀಡದ ಕಾರಣ ನೋಟೀಸು ನೀಡಲು ತೀರ್ಮಾನಿಸಲಾಯಿತು.

10) ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಚಿಕ್ಕಮಗಳೂರು ಜಿಲ್ಲೆಗಳಿಗೆ ಜಾಗೃತ ದಳ ರಚಿಸಿ ಆರ್.ಟಿ.ಇ ಶುಲ್ಕ ಮರುಪಾವತಿ ಮಾಡಲಾಗಿರುವ ದಾಖಲೆಗಳನ್ನು ಪರಿಶೀಲಿಸಲು ತೀರ್ಮಾನಿಸಲಾಯಿತು.

11) ಪ್ರತೀ ಜಿಲ್ಲೆಯ ಆರ್.ಟಿ.ಇ ನೋಡಲ್ ಅಧಿಕಾರಿಗಳು 2016-17ನೇ ಸಾಲಿನ ಪ್ರವೇಶ ಪ್ರಕ್ರಿಯೆಗೆ ನಿಗಧಿಪಡಿಸಿರುವ ವೇಳಾಪಟ್ಟಿಯಂತೆ ಕರ್ತವ್ಯನಿರ್ವಹಿಸಲು ಸೂಚಿಸಲಾಯಿತು.

12) ಮೇಲೆ ತಿಳಿಸಲಾದ ಅಂಶಗಳಲ್ಲಿ ಯಾವುದೇ ಅಧಿಕಾರಿಯು ಕರ್ತವ್ಯ ನಿರ್ಲಕ್ಷ್ಯ ತೋರಿದಲ್ಲಿ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಯಿತು.

15/2/16
(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಶ್ರೀ. ಕೆ.ಆನಂದ., ನಿರ್ದೇಶಕರು, ಪ್ರಾಥಮಿಕ ಶಿಕ್ಷಣ.
2. ಶ್ರೀ. ಎಚ್.ವಿ. ಕೆಂಪರಾಜು., ಉಪನಿರ್ದೇಶಕರು, ಪ್ರಾಥಮಿಕ ಶಿಕ್ಷಣ
3. ಶ್ರೀಮತಿ ಆರ್. ಮಂಜುಳ, ಹಿರಿಯ ಸಹಾಯಕ ನಿರ್ದೇಶಕರು, ಸಂಸ್ಕೃತ ವಿಭಾಗ.
4. ಶ್ರೀಮತಿ ಪಿ. ಯಶೋದ., ಸಹಾಯಕ ನಿರ್ದೇಶಕರು, ಆರ್.ಟಿ.ಇ. ವಿಭಾಗ.
5. ರಾಜ್ಯದ ಎಲ್ಲಾ ಜಿಲ್ಲೆಗಳ ಆರ್.ಟಿ.ಇ ನೋಡಲ್ ಅಧಿಕಾರಿಗಳು.
6. ಶ್ರೀ ಪಾಲಾಕ್ಷಯ್ಯ, ಸಮಾಲೋಚಕರು, ಆರ್.ಟಿ.ಇ ಕೋಶ.
7. ಶ್ರೀ ಎಂ. ಮಹಮ್ಮದ್ ಬಷೀರ್, ಸಮಾಲೋಚಕರು, ಆರ್.ಟಿ.ಇ ಕೋಶ.
8. ಶ್ರೀ ರಮೇಶ್, ಅಧೀಕ್ಷಕರು, ವೇತನ ಶಾಖೆ,
9. ಶ್ರೀ ಶಿವಕುಮಾರ್, ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವೆಲಪ್‌ಮೆಂಟ್ ಸೆಂಟರ್, ಎಸ್.ಎಸ್.ಎ.
10. ಶ್ರೀಮತಿ ವಿಜಯಾ ಅರುಣ, ಪ್ರೋಗ್ರಾಮರ್, ಸಾಫ್ಟ್‌ವೇರ್ ಡೆವೆಲಪ್‌ಮೆಂಟ್ ಸೆಂಟರ್, ಎಸ್.ಎಸ್.ಎ.
11. ರಾಜ್ಯದ ಎಲ್ಲಾ ಜಿಲ್ಲೆಗಳ ಕಂಪ್ಯೂಟರ್ ಪ್ರೋಗ್ರಾಮರ್ಸ್.
12. ಕಛೇರಿ ಪ್ರತಿ.